**ದಿನಾಂಕಃ 25.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನ್ಯಾಯಾಲಯದ ಅನುಮತಿ ಮೇರೆಗೆ ವಿಶೇಷ ಸಾರ್ವಜನಿಕ ಅಭಿಯೋಜಕರು ಹಾಗೂ ಆರೋಪಿತರ ಪರ ವಕೀಲರ ಸಮಕ್ಷಮ ಒಂದು ಲಕೋಟೆಯನ್ನು ತೆರೆದು ನೋಡಲಾಗಿ, ಅದರಲ್ಲಿ ಸಾಕ್ಷಿಯ ಕಲಂ 164 ಸಿ.ಆರ್.ಪಿ.ಸಿ.ರ ಹೇಳಿಕೆ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ 2 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ 2(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಕೆ.ಎಸ್.ಎನ್. ವಕೀಲರಿಂದಃ</u>**

2. ಸಾರ್ವಜನಿಕ ರಸ್ತೆಯ ವಿಚಾರದಲ್ಲಿ ನನಗೂ ಮತ್ತು ಊರಿನ ಗ್ರಾಮಸ್ಥರಿಗೂ 2024 ರಲ್ಲಿ ಗಲಾಟೆಯಾಗಿತ್ತು ಎಂದರೆ ಸಾಕ್ಷಿಯು ಜಾಗ ನಮ್ಮ ಸ್ವಂತದ್ದು ಎಂದು ಹೇಳಿ, ಅದರಲ್ಲಿ ನಮಗೆ ದಾರಿ ಬೇಕು ಎಂದು ಆರೋಪಿತರು ಗಲಾಟೆ ಮಾಡಿರುತ್ತಾರೆ. ಪರಗೋಡು ಗ್ರಾಮ ಪಂಚಾಯ್ತಿ ಕಚೇರಿಗೆ ಊರಿನ ಗ್ರಾಮಸ್ಥರು ರಸ್ತೆ ಬಿಟ್ಟುಕೊಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಆರೋಪಿತರು ಮಾತ್ರ ಅರ್ಜಿ ನೀಡಿದ್ದರು ಎಂದು ನುಡಿಯುತ್ತಾರೆ. ಅದೇ ವಿಚಾರವಾಗಿ ಚಿಕ್ಕಬಳ್ಳಾಪುರ ಜನಸ್ಪಂದನ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮತ್ತು ಉಸ್ತುವಾರಿ ಸಚಿವರು ಬಂದಿದ್ದ ಸಂದರ್ಭದಲ್ಲಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿದ್ದರು ಎಂದು ನನ್ನ ವಿರುದ್ದ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ಜನಸ್ಪಂದನ ಕಾರ್ಯಕ್ರಮದಲ್ಲಿ ಅರ್ಜಿ ನೀಡಿದ ಆಧಾರದ ಮೇಲೆ ಪಂಚಾಯ್ತಿ ಅಭಿವೃದ್ದಿ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಸದರಿ ಸಮಯ ಅದು ಸಾರ್ವಜನಿಕ ರಸ್ತೆ ಬಿಟ್ಟುಕೊಡಿ ಎಂದು ಅಧಿಕಾರಿಗಳು ನನಗೆ ಸೂಚಿಸಿದ್ದರು ಎಂದರೆ ಸರಿಯಲ್ಲ. ಸಾರ್ವಜನಿಕ ರಸ್ತೆ

ನಮಗೂ ಮತ್ತು ಆರೋಪಿತರಿಗೂ ಮನೆಯ ಮುಂದೆ ಹೋಗುವ ರಸ್ತೆ ಎಂದರೆ ಸರಿಯಲ್ಲ. ಆ ರೀತಿ ಅಧಿಕಾರಿಗಳು ಬಂದು ಹೋದ ನಂತರ ನಾನು ಆರೋಪಿತರ ವಿರುದ್ದ ಎಸ್.ಸಿ/ಎಸ್.ಟಿ. ಪಿಓಎ ಅಡಿಯಲ್ಲಿ ಪ್ರಕರಣ ದಾಖಲಿಸುತ್ತೇನೆಂದು ಬೆದರಿಕೆ ಹಾಕಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-2-ಲಕ್ಷ್ಮಣರವರು ಆತ್ಮೀಯ ಸ್ನೇಹಿತರು ಎಂದರೆ ಸರಿ. ನಮ್ಮ ಊರಿಗೂ ಅವರ ಊರಿಗೂ 20 ಕಿ. ಮೀಟರ್ ಅಂತರ ಇದೆ. ನಮ್ಮ ಊರಿಗೆ ಪಂಚಾಯ್ತಿ ಅಧಿಕಾರಿಗಳು ಬಂದಾಗ ಚಾಸಾ-2 ರವರು ಬಂದಿರಲಿಲ್ಲ. ಬಾಗೇಪಲ್ಲಿ ಮುನಿಸಿಪಲ್ ಕಚೇರಿಯ ಮುಂದೆ ಬರುವಂತೆ ಚಾಸಾ-2 ರವರಿಗೆ ಹೇಳಿರಲಿಲ್ಲ. ಸದರಿ ದಿನ ಬಾಗೇಪಲ್ಲಿಯ ರಾಮಕೃಷ್ಣರವರ ಚೌಲ್ಟರಿಯಲ್ಲಿ ಕಾರ್ಯಕ್ರಮವಿತ್ತು, ನಾನು ಅಲ್ಲಿಗೆ ಹೋಗಿ ಬಂದು ಟೀ ಯನ್ನು ಚಾಸಾ-2 ರವರೊಂದಿಗೆ ಕುಡಿಯುತ್ತಿದ್ದೇವು. ಚಾಸಾ-2 ರವರು ಚೌಲ್ಟರಿಗೆ ಬಂದಿರಲಿಲ್ಲ, ಆದರೆ ಮುನಿಸಿಪಲ್ ಕಚೇರಿಯ ಬಳಿ ಬಂದಿದ್ದರು. ಚಾಸಾ-3-ನಾರಾಯಣಸ್ವಾಮಿ ಮತ್ತು ಚಾಸಾ-4-ಕೃಷ್ಣಪ್ಪರವರು ನನಗೆ ಸ್ನೇಹಿತರು. ಚಾಸಾ-2 ರಿಂದ ಚಾಸಾ-4 ರವರು ನನ್ನ ಮಾತು ಕೇಳುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಾಸಾ-2 ರವರು ಕೇಳುತ್ತಾರೆ. ಚಾಸಾ-3 ಮತ್ತು ಚಾಸಾ-4 ರವರು ಸುಮಾರು 10 ವರ್ಷದಿಂದ ಸ್ನೇಹಿತರು.

-7-

ಚಾಸಾ-3 ಮತ್ತು ಚಾಸಾ-4 ರವರ ಊರಿಗಳಿಗೆ ನಮ್ಮ ಊರಿನಿಂದ 8 ಕಿ. ಮೀಟರ್ ಅಂತರವಿದೆ. ಚಾಸಾ-2 ರಿಂದ ಚಾಸಾ-4 ರವರು ಹಾಗೂ ನಾನು ಬಾಗೇಪಲ್ಲಿಯಲ್ಲಿ ಮಾತ್ರ ಭೇಟಿಯಾಗುತ್ತಿದ್ದೇವು, ನಮ್ಮ ಊರಿನಲ್ಲಿ ಭೇಟಿಯಾಗುತ್ತಿರಲಿಲ್ಲ. ಜನಸ್ಪಂದನ ಕಾರ್ಯಕ್ರಮದಲ್ಲಿ ನಡೆದ ವಿಚಾರವನ್ನು ಚಾಸಾ-2 ರಿಂದ ಚಾಸಾ-4 ರವರಿಗೆ ತಿಳಿಸಿರಲಿಲ್ಲ. ಸಾರ್ವಜನಿಕ ರಸ್ತೆಗೆ ನಡೆದ ಗಲಾಟೆ ವಿಚಾರವನ್ನು ಚಾಸಾ-2 ರಿಂದ ಚಾಸಾ-4 ರವರಿಗೆ ತಿಳಿಸಿರುವುದಿಲ್ಲ. ಮುನಿಸಿಪಲ್ ಕಚೇರಿಗೂ ಮತ್ತು ಡಿವಿಜಿ ರಸ್ತೆಗೂ ಸುಮಾರು 100 ಮೀಟರ್ ಅಂತರವಿರುತ್ತದೆ. ದಿಃ 04.05.2024 ರಂದು ನಾನು ಸದರಿ ಸ್ಥಳಕ್ಕೆ ಹೋಗಿರಲಿಲ್ಲ, ಅಲ್ಲಿ ಯಾವುದೇ ಗಲಾಟೆ ನಡೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆಯಾದ ಮರುದಿನ ಮಾತ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು 04.05.2024 ರಂದು ಆಸ್ಪತ್ರೆಗೆ ಹೋಗಿರಲಿಲ್ಲ, ಆದರೆ ಪೊಲೀಸರು ಆ ದಿನ ನನ್ನನ್ನು ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿರುತ್ತಾರೆ. ಹಳ್ಳಿಯಲ್ಲಿ ನಡೆದಂತಹ ಸಾರ್ವಜನಿಕ ರಸ್ತೆಯ ವಿಚಾರದಲ್ಲಿ ದೂರು ನೀಡಿದ್ದ ಕಾರಣ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ದಿನ ಮುನಿಸಿಪಲ್ ಕಚೇರಿಯ ಮುಂದೆ 5 ಜನ ಆರೋಪಿತರು ನನ್ನ ಮೇಲೆ ಗಲಾಟೆ

ಮಾಡಿ, ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅವರುಗಳು ಕೆಟ್ಟ ಮಾತುಗಳಿಂದ ನನ್ನನ್ನು ನಿಂದಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಡಿ.ಸಿ. ಕಚೇರಿಗೆ ಹೋಗಿದ್ದೆ ಎಂದು ತಿಳಿಸಿದ್ದೆ, ಆದರೆ ಹೋಗಿಲ್ಲ. ಅದೇ ರೀತಿ ನಾನು ಮಾನ್ಯ ನ್ಯಾಯಾಲಯಕ್ಕೆ ಹೋಗಿರಲಿಲ್ಲ ಎಂದು ತಿಳಿಸಿದ್ದೆ, ಆದರೆ ನಾನು ಮಾನ್ಯ ನ್ಯಾಯಾಲಯಕ್ಕೆ ಹೋಗಿದ್ದೆ. ಆದಾದ ನಂತರ ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ 25.03.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿ)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು. ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**